**SC No. 124/2018**
**C/w 311/2023**
**C/w 23/2023**
**C/w 42/2026**
**P.W. 1**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 124/2018 C/w 311/2023**
**C/w 23/2023 C/w 42/2026**

**P.W. 1**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **13.07.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ **1** ರಿಂದ **3** ನೇ ಆರೋಪಿತರ ಪರ ಶ್ರೀ. **CK** ವಕೀಲರಿಂದ :

1. ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನ್ನ ಅಣ್ಣ ರಘು ಕುಮಾರಸ್ವಾ ಮಿ ಠಾಣೆಯಲ್ಲಿ ರೌಡಿಶೀಟರ್ ಎಂದರೆ ಸರಿ. ನನ್ನ ಅಣ್ಣನ ವಿರುದ್ಧ ಹಲವಾರು ಕೊಲೆ, ಸುಲಿಗೆ, ದರೋಡೆ ಪ್ರಕರಣಗಳು ಇತ್ತು ಎಂದರೆ ಸರಿ. ನನ್ನ ವಿರುದ್ಧ ಸರಿ ಜೆ.ಪಿ. ನಗರ ಠಾಣೆಯಲ್ಲಿ ಜೋಡಿ ಕೊಲೆ ಪ್ರಕರಣ ಇತ್ತು ಎಂದರೆ ಸರಿ. ನನ್ನ ವಿರುದ್ಧ ಸಹ ಆಗ ರೌಡಿ ಶೀಟ್ ತೆಗೆದಿತ್ತು ಎಂದರೆ ಸರಿ. ಆ ಪ್ರಕರಣದಲ್ಲಿ ನಾನು 1 ನೇ ಆರೋಪಿ ಎಂದರೆ ಸರಿ. ಚಾಸಾ. 13 ಮತ್ತು 14 ರವರು ಆ ಪ್ರಕರಣದಲ್ಲಿ ಆರೋಪಿತರು ಎಂದರೆ ಸರಿ. ಈ ಕೇಸಿನ 4 ನೇ ಆರೋೀಪಿ ಮಂಜುನಾಥ್ @ ತಮ್ಮ ಮಂಜುನಾಥ್ ರವರ ಕೊಲೆ ಆರೋಪ ಆಗಿದೆ ಎಂದರೆ ಸರಿ. ದಿನಾಂಕ 21.08.2017 ರಂದು ನನಗೆ ಮಾಹಿತಿ ಬಂದ ನಂತರ ನಾನು ರಾತ್ರಿ 12.15 ಕ್ಕೆ ಘಟನಾ ಸ್ಥಳಕ್ಕೆ ಹೋಗಿದ್ದೆ. ನಾನು ಹೋಗುವಷ್ಟರಲ್ಲಿ ಪೊಲೀಸರು ಮತ್ತು ಸುಮಾರು ಜನರು ಸೇರಿದ್ದರು. ನಾನು ಸದರಿ ಸ್ಥಳದಲ್ಲಿ 30 ನಿಮಿಷ ಇದ್ದೆ. ನಾನು ಅಂಬುಲೇನ್ಸ್ ನಲ್ಲಿ ಹೋಗಿರಲಿಲ್ಲ, ಠಾಣೆಗೆ ಹೋಗಿರುತ್ತೇನೆ. ನಾನು ಠಾಣೆಗೆ ಹೋದಾಗ ರಾತ್ರಿ ಸುಮಾರು 1.00 ಗಂಟೆಯಾಗಿತ್ತು. ಠಾಣೆಯಲ್ಲಿ ರಾತ್ರಿ 2.00 ಗಂಟೆಯ ವರೆಗೆ ಇದ್ದೆ. ಆಗ ದೂರನ್ನು ನೀಡಿಲ್ಲ, ಬೆಳಗ್ಗೆ ದೂರು ನೀಡಿದ್ದೇನೆ. ನಾನು ಅಲ್ಲಿಗೆ ಹೋಗಿದ್ದ ಬಗ್ಗೆ ನನ್ನ ಸಹಿ ಪಡೆದುಕೊಂಡಿಲ್ಲ. ಮೊದಲು ಮನೆಗೆ ಬಂದು ನಂತರ ಆಸ್ಪತ್ರೆಗೆ ಹೋಗಿದ್ದೆ. ಆಸ್ಪತ್ರೆಗೆ ಹೋದಾಗ ಬೆಳಗ್ಗೆ 10.00 ಗಂಟೆಯಾಗಿತ್ತು. ಪೊಲೀಸರು ಆಗ ಬಂದಿದ್ದರು.

**SC No. 124/2018**
**C/w 311/2023**
**C/w 23/2023**
**C/w 42/2026**
**P.W. 1**

ಅಲ್ಲಿ ನನ್ನ ಹೇಳಿಕೆ ಮಾಡಿಕೊಂಡಿಲ್ಲ, ಸಹಿ ಪಡೆದುಕೊಂಡಿಲ್ಲ. ಅಲ್ಲಿ ಸುಮಾರು 1.00 ಗಂಟೆಯವರೆಗೆ ಇದ್ದೆವು.

2. ಮಹಜರ್ ಅನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆ ಬರೆದರು ಎಂದು ಗೊತ್ತಿಲ್ಲ, ಅದನ್ನು ರೈಟರ್ ಬರೆದಿರುತ್ತಾರೆ. ಸದರಿ ಮಹಜರ್ ಗೆ ನಾನು, ಚಂದ್ರಶೇಖರ್, ಉಮೇಶ್, ಮಹೇಶ್ ಹಾಗೂ ಶಿವಕುಮಾರ್ ರವರು ಸಹಿ ಮಾಡಿರುತ್ತಾರೆ. ಸಹಿ ಮಾಡಿದಾಗ ಎಷ್ಟು ಗಂಟೆಯಾಗಿತ್ತು ಎಂದು ಹೇಳಲು ಆಗುವುದಿಲ್ಲ. ದೂರನ್ನು ನಾನು ಬರೆದಿಲ್ಲ. ಠಾಣೆಯಲ್ಲಿ ಪೊಲೀಸರು ಬರೆದ ನಂತರ ನಾನು ಸಹಿ ಮಾಡಿದ್ದೇನೆ. ದೂರನ್ನು ಬರೆದ ಸಮಯ ಗೊತ್ತಿಲ್ಲ. ಪೊಲೀಸರ ಹೆಸರನ್ನು ಹೇಳಲು ಆಗುವುದಿಲ್ಲ. 2 ನೇ ಆರೋಪಿ ಹಾಗೂ ನನ್ನ ಅಣ್ಣ ಮೊದಲು ಸ್ನೇಹಿತರಾಗಿದ್ದರು ಎಂದರೆ ಸರಿ. ಅವರ ಮತ್ತು ನಮ್ಮ ಮನೆ ಸ್ವಲ್ಪ ದೂರದಲ್ಲಿ ಇದೆ. ನನ್ನ ಅಣ್ಣನ ವಿರುದ್ಧ ತಲಘಟ್ಟಪುರ ಠಾಣೆಯಲ್ಲಿ ಕೊಲೆ ಕೇಸಿನಲ್ಲಿ ಅವರು ಸಹ ಆರೋಪಿ ಎಂದರೆ ಸರಿ. ನಮ್ಮ ಅಣ್ಣನಿಗೂ ಹಗೂ 2 ನೇ ಆರೋಪಿಗೂ ವೈಷಮ್ಯ ಇದ್ದ ಬಗ್ಗೆ ದೂರು ನೀಡಿಲ್ಲ. ನಾನು ಹೊಸ್ಸಳ ಹಾಗೂ ಕಂಟೋಲ್ ರೂಂ ಗೆ ತಿಳಿಸಿಲ್ಲ, ತಿಳಿಸಲು ತೊಂದರೆ ಇರಲಿಲ್ಲ. ನಾನು ಆರೋಪಿಯನ್ನು ಗುರುತಿಸಿದ್ದು ಯಾವ ದಿನ ಎಂದು ಹೇಳಲು ಬರುವುದಿಲ್ಲ. ನಾನು ಆರೋಪಿಯನ್ನು ಗುರುತಿಸುವಾಗ ಬೇರೆ ಯಾರು ಇರಲಿಲ್ಲ. ಆರೋಪಿಯನ್ನು ಸೆಲ್ ನಿಂದ ಆಚೆ ಕರೆಸಿರಲಿಲ್ಲ. ಪೊಲೀಸರು ನಮ್ಮ ಅಣ್ಣನನ್ನು ಕೊಲೆ ಮಾಡಿದ್ದವರು ಆರೋಪಿತರೇ ಎಂದು ತೋರಿಸಿದ್ದರಿಂದ ನಾನು ಅವರನ್ನು ಗುರುತಿಸುತ್ತಿದ್ದು ನನಗೆ ಈ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ನನಗೆ 2 ನೇ ಆರೋಪಿ ಬಿಟ್ಟು ಉಳಿದ ಆರೋಪಿತರ ಬಗ್ಗೆ ಖುದ್ದು ಮಾಹಿತಿ ಇಲ್ಲ. ನಮ್ಮ ಅಣ್ಣನಿಗೆ ಆಗದೇ ಇದ್ದವರು ಸೊಸೈಟಿಯಲ್ಲಿ ಇರಬಹುದು ಎಂದರೆ ಇರಬಹುದು. ನಮ್ಮ ಅಣ್ಣನನ್ನು ಯಾರು ಕೊಲೆ ಮಾಡಿದ್ದು ಎಂದು ಗೊತ್ತಿಲ್ಲ ಹಾಗೂ ಪೊಲೀಸರು ಫೋಟೋಗಳನ್ನು ತೋರಿಸಿ ಇವರೇ ಎಂದು ಹೇಳಿದ್ದರಿಂದ ನಾನು ಗುರುತಿಸುತ್ತಿದ್ದೇನೆ ಎಂದೆರ ಸರಿ.

**SC No. 124/2018**
**C/w 311/2023**
**C/w 23/2023**
**C/w 42/2026**
**P.W. 1**

3. ನಮ್ಮ ಅಣ್ಣ ಯಾವುದೇ ಪ್ರಕರಣದಲ್ಲಿ ಸಿಲುಕಿದರೂ ಸಹ 2 ನೇ ಆರೋಪಿ ಹೆಸರನ್ನು ನಮ್ಮ ಅಣ್ಣ ಹಾಕಿಸುತ್ತಿದ್ದು, ಆ ಕಾರಣದಿಂದ 2 ನೇ ಆರೋಪಿನವರ ಮನೆಯವರು ಬಂದು ನಮ್ಮ ಬಳಿ ಜಗಳ ಮಾಡುತ್ತಿದ್ದರು ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ **6, 7** ಮತ್ತು **9** ನೇ ಆರೋಪಿತರ ಪರ‌ಶ್ರೀ **DGS** ವಕೀಲರು ಶ್ರೀ. **CK** ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

ಪಾಟೀ ಸವಾಲುಃ **5** ನೇ ಆರೋಪಿ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.